No.of Printed Pages : 2

# GN-048

101974

ಮೂರನೇ ಸೆಮಿಸ್ಟರ್ ಬಿ.ಎ./ಬಿ.ಹೆಚ್.ಎಂ./ಬಿ.ಎಸ್.ಡಬ್ಲ್ಯೂ. ಪರೀಕ್ಷೆ, ಡಿಸೆಂಬರ್ - 2019

(CBCS) (F+R) (2015-16 and Onwards)

## ಕನ್ನಡ ಭಾಷಾ ಪತ್ರಿಕೆ - III

### ಸುವರ್ಣ ಸಂಪದ

Time : 3 Hours

Max. Marks : 70

**I.** (ಅ) ಪದ್ಯದ ಭಾವಾರ್ಥ ಬರೆಯಿರಿ. **1x6=6**

ಅನುಭಾವವಿಲ್ಲದವನ ಭಕ್ತಿ
ತಲೆಕೆಳಗಾದುದಯ್ಯ
ಅನುಭಾವವೇ ಭಕ್ತಿಗಾಧಾರ
ಅನುಭಾವವೇ ಭಕ್ತಿಗೆ ನೆಲೆವನೆ,
ಅನುಭಾವವುಳ್ಳವರ ಕಂಡು ತೂರ್ಯ
ಸಂಭಾಷಣೆಯ ಬೆಸಗೊಳ್ಳದಿದ್ದರೆ
ನರಕದಲ್ಲಿಕ್ಕಯ್ಯ ರಾಮನಾಥ!

(ಆ) **ಎರಡಕ್ಕೆ** ಟಿಪ್ಪಣಿ ಬರೆಯಿರಿ. **2x2=4**

(1) ಪಂಪ

(2) ಅಂಬಿಗರ ಚೌಡಯ್ಯ

(3) ಕೂಡಲ ಸಂಗಮ ದೇವ

(4) ಗಂಗಾನಂದನ

(ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ. **1x10=10**

(1) ಕೃಷ್ಣನ ಆಗಮನದಿಂದ ದುರ್ಯೋಧನನ ಆಸ್ಥಾನದಲ್ಲಿ ಉಂಟಾದ ಸನ್ನಿವೇಶವನ್ನು ವಿವರಿಸಿ.

(2) ಭರತ ಚಕ್ರವರ್ತಿಯ ಗರ್ವ ಸೋರಿದ ಬಗೆ ಹೇಗೆ ? ವಿವರಿಸಿ.

**II.** (ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **2x5=10**

(1) ಠಾಕೂರರ ಮನೆತನದ ಬೆಳವಣಿಗೆಗೆ ಕಾರಣರಾದವರು.

(2) ವೈಸರಾಯ್ ಮಂತ್ರಿಮಂಡಲದಲ್ಲಿ ಅಂಬೇಡ್ಕರ್ ಅವಕಾಶ ಪಡೆದ ಪ್ರಸಂಗ.

(3) ಕಂಠೀರವ ಸ್ಟೇಡಿಯಂನಲ್ಲಿ ಏರ್ಪಾಟಾಗಿದ್ದ ಕಾಳಿಂಗರಾಯರ ಸಂಗೀತ ಸಭೆ.

(ಆ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. **1x10=10**

(1) ಅಂಬೇಡ್ಕರ್ ಹೋರಾಟ ನಡೆಸಲು ಕಾರಣವಾದ ಘಟನೆಗಳು ಯಾವುವು ? ವಿವರಿಸಿ.

(2) 'ವ್ಯಕ್ತಿಯೇ ಐತಿಹ್ಯ, ಐತಿಹ್ಯವೇ ವ್ಯಕ್ತಿ' – ಈ ಹೇಳಿಕೆಯ ಹಿನ್ನೆಲೆಯಲ್ಲಿ ವಿಶ್ವೇಶ್ವರಯ್ಯನವರ ಮೇರು ವ್ಯಕ್ತಿತ್ವವನ್ನು ವಿವೇಚಿಸಿ.

**P.T.O.**

**III.** (ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ. **1x5=5**

(1) ಹರಿದ್ವಾರಕ್ಕೆ ಇರುವ ಇತರ ಹೆಸರುಗಳು ಮತ್ತು ಅವುಗಳ ಹಿನ್ನೆಲೆ.

(2) ಪೋರ್ಟ್‌ಬ್ಲೇರಿನಲ್ಲಿ ನೆಲೆಸಿರುವ ಕನ್ನಡಿಗರು.

(ಆ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. **1x10=10**

(1) ಹರಿದ್ವಾರ ಮತ್ತು ಸುತ್ತ–ಮುತ್ತಲ ಧಾರ್ಮಿಕ ಸ್ಥಳಗಳ ಮಹತ್ವವನ್ನು ವಿವರಿಸಿ.

(2) ಆಲ್ಬರ್ಟ್ ವಿಶ್ವವಿದ್ಯಾಲಯದ ಸ್ವರೂಪ ಹಾಗೂ ಶಿಕ್ಷಣ ವ್ಯವಸ್ಥೆಯನ್ನು ವಿವರಿಸಿ.

**IV.** (ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. **1x5=5**

(1) ಬೌದ್ಧ ಧರ್ಮ ಭಾರತದ ರಾಷ್ಟ್ರೀಯ ಧರ್ಮವಾದ ಬಗೆ.

(2) ಆನೆಹಳ್ಳದಲ್ಲಿದ್ದ ವಿದ್ಯಾರ್ಥಿನಿಯರನ್ನು ರಕ್ಷಿಸಿದ ರೀತಿ.

(ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **1x10=10**

(1) 'ಅಭಿವೃದ್ಧಿ' ಯನ್ನು ಕುರಿತ ನಾಗೇಶ ಹೆಗಡೆಯವರ ವಿಚಾರಗಳನ್ನು ಚರ್ಚಿಸಿ.

(2) ಅಶೋಕ ವೃಕ್ಷದ ಪೌರಾಣಿಕ ಐತಿಹ್ಯ ಹಾಗೂ ಅಶೋಕ ವೃಕ್ಷದ ಹುಡುಕಾಟವನ್ನು ವಿವರಿಸಿ.

- o O o -